ದಿನಾಂಕ: 11/05/2022

# ಕಾರ್ಯಕ್ರಮದ ವರದಿ

## ಎಟಿಎಂಇ ಕಾಲೇಜು ವತಿಯಿಂದ "ಮಹಿಳಾ ಸಬಲೀಕರಣ ಜಾಗೃತಿ ಅಭಿಯಾನ"




ನಗರದ ಮೈಸೂರು–ಬನ್ನೂರು ರಸ್ತೆಯಲ್ಲಿರುವ ಎ.ಟಿ.ಎಂ.ಇ. ಇಂಜಿನಿಯರಿಂಗ್ ಕಾಲೇಜಿನ ಆಂತರಿಕ ದೂರು ಸ್ವೀಕಾರ ಸಮಿತಿ, ಮಹಿಳಾ ಘಟಕ ಮತ್ತು ವರುಣಾ ಗ್ರಾಮ ಪಂಚಾಯತ್ ಸಹಯೋಗದಲ್ಲಿ ಮೈಸೂರು ತಾಲ್ಲೂಕ್ ವರುಣಾ ಗ್ರಾಮಪಂಚಾಯತ್ ವ್ಯಾಪ್ತಿಯ ಮಹಿಳೆಯರಿಗೆ "ಮಹಿಳಾ ಸಬಲೀಕರಣ ಜಾಗೃತಿ" ಕಾರ್ಯಕ್ರಮವನ್ನು ವರುಣಾ ಗ್ರಾಮಪಂಚಾಯತ್‌ನ ಅಂಬೇಡ್ಕರ್ ಸಮುದಾಯ ಭವನದಲ್ಲಿ ದಿನಾಂಕ: 11/05/2022 ರಂದು ಹಮ್ಮಿಕೊಳ್ಳಲಾಗಿತ್ತು. ಸಮಾರಂಭವನ್ನು ವೇದಿಕೆ ಮೇಲಿನ ಗಣ್ಯರು ದೀಪ ಬೆಳಗಿಸಿ ಉದ್ಘಾಟಿಸಿದರು.

ನಂತರ ಮುಖ್ಯ ಅತಿಥಿ ಹಾಗೂ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿ ಪಿರಿಯಾಪಟ್ಟಣ ತಾಲ್ಲೂಕ್ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀಮತಿ ಡಿ.ಜೆ. ಮಮತಾ ರವರು ಭಾಗವಹಿಸಿ ಮಾತನಾಡಿದರು. "ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಪುರುಷ ಸಮಾನಳಾಗಿ ಸ್ವತಂತ್ರ ಹಾಗೂ ಸ್ವಾವಲಂಭಿ ಬದುಕು ಸಾಗಿಸುತ್ತಿದ್ದಾಳೆ ಇದು ಮಹಿಳಾ ಸಬಲೀಕರಣದ ಒಂದು ಭಾಗವಾಗಿದೆ, ಕಾಲ ಬದಲಾದ ಹಾಗೆ ಮಹಿಳೆಯರು ತಮ್ಮ ದಾಸ್ಯತ್ವ ಮನೋಭಾವದಿಂದ ಹೊರಬಂದು ಸ್ವಾವಲಂಭಿಯಾಗಿ ಬದುಕು ಕಟ್ಟಿಕೊಳ್ಳಬೇಕು, ಮಹಿಳೆಯರ ಸ್ವಾವಲಂಭಿ ಬದುಕಿಗೆ ಸರ್ಕಾರದ ಹಲವು ಯೋಜನೆಗಳು ಆಸರೆಯಾಗಿವೆ ಆದರೆ ಕುಟುಂಬದ ಸದಸ್ಯರು ಹಾಗೂ ಸಮಾಜ ಇದಕ್ಕೆ ಸಹಕರಿಸುವ ಮನೋಭಾವ ಹೊಂದಿರಬೇಕು ಎಂದು ತಿಳಿಸಿದರು.

ಮತ್ತೋರ್ವ ಗೌರವ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಮೈಸೂರಿನ ಮಹಿಳಾ ಅಭಿವೃದ್ಧಿ ನಿಗಮದ ಸಮಾಲೋಚಕರಾದ ಶ್ರೀಮತಿ ಹೇಮಾರವರು ಮಹಿಳೆಯರು ಸ್ವ–ಉದ್ಯೋಗ ಆರಂಭಿಸಲು ಸರ್ಕಾರ ಹಾಗೂ ಬ್ಯಾಂಕುಗಳಿಂದ ದೊರೆಯುವ ವಿವಿಧ ಯೋಜನೆಗಳು, ಸಾಲ ಸೌಲಭ್ಯ ಹಾಗೂ ಹಲವು ಸ್ವ–ಉದ್ಯೋಗ ತರಬೇತಿಗಳ ಕುರಿತು ಮಾಹಿತಿ ನೀಡಿದರು.

ಇದಕ್ಕೂ ಮುನ್ನ ಕಾರ್ಯಕ್ರಮದ ಆಯೋಜನೆಯ ಉದ್ದೇಶ ಮತ್ತು ರೂಪುರೇಷೆಗಳ ಕುರಿತು ಎಟಿಎಂಇ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಲ್.ಬಸವರಾಜ್ ರವರು ಪ್ರಾಸ್ತಾವಿಕವಾಗಿ ಮಾತನಾಡಿ ಮಹಿಳೆಯರು ಇಂತಹ ಕಾರ್ಯಕ್ರಮಗಳ ಮೂಲಕ ತಮ್ಮ ಅಭಿವೃದ್ದಿಗೆ ಪೂರಕವಾದ ಮಾಹಿತಿ ಪಡೆದುಕೊಂಡು ಸ್ವಾವಲಂಭಿ ಬದುಕಿಗೆ ಭದ್ರ ಬುನಾದಿ ಹಾಕಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಕುರಿತು ಕಾಲೇಜಿನ ಆಡಳಿತಾಧಿಕಾರಿ ಡಾ.ಸಚ್ಚಿದಾನಂದಮೂರ್ತಿ, ವಕೀಲರಾದ ಎಂ.ಎ. ಹೇಮಲತಾ ಹಾಗೂ ವರುಣಾ ಗ್ರಾಮ ಪಂಚಾಯತ್ ಅಭಿವೃದ್ದಿ ಅಧಿಕಾರಿ ಶ್ರೀಧರ್ ಮಾತನಾಡಿದರು.

ಎಟಿಎಂಇ ಕಾಲೇಜಿನ ಪ್ರಾಧ್ಯಾಪಕ ಎಸ್ ರವಿಕುಮಾರ್ ಸ್ವಾಗತಿಸಿದರು, ಕಾಲೇಜಿನ ಸಿ.ಐ.ಸಿ.ಸಿ ಮತ್ತು ಮಹಿಳಾ ಘಟಕದ ಅಧ್ಯಕ್ಷರಾದ ಪ್ರೊ .ಭಾಗ್ಯಶ್ರೀ ಎಸ್.ಆರ್. ವಂದಿಸಿದರು ಮತ್ತು ಸಿ, ಚಂದ್ರಶೇಖರ್ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ.ಎಲ್.ಬಸವರಾಜ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದಮೂರ್ತಿ, ಸಿ.ಐ.ಸಿ.ಸಿ ಮತ್ತು ಮಹಿಳಾ ಘಟಕದ ಅಧ್ಯಕ್ಷರಾದ ಪ್ರೊ .ಭಾಗ್ಯಶ್ರೀ ಎಸ್.ಆರ್. ವಕೀಲರಾದ ಎಂ.ಎ. ಹೇಮಲತಾ ಮತ್ತು ಕಾಲೇಜಿನ ಪ್ರಾಧ್ಯಾಪಕರುಗಳಾದ ಎಸ್ ರವಿಕುಮಾರ್ ಸಿ, ಚಂದ್ರಶೇಖರ್, .ಸ್ವಪ್ನಾ,ಹೆಚ್. ನವ್ಯ, ರವಿ, ಲೈಬ್ರರಿ ಪ್ರಕಾಶ್, ನಂದೀಶ್ ಹಾಗೂ ವರುಣಾ ಗ್ರಾಮ ಪಂಚಾಯತ್ ಸದಸ್ಯರು, ಹಾಗೂ ವಿವಿಧ ಸ್ತ್ರೀಶಕ್ತಿ ಸಂಘಗಳ ಸದಸ್ಯರು, ಆಶಾ ಕಾರ್ಯಕರ್ತೆರು ಕಾಲೇಜಿನ ವಿವಿಧ ವಿಭಾಗಗಳ ಮಹಿಳಾ ಅಧ್ಯಾಪಕರುಗಳು, ವಿದ್ಯಾರ್ಥಿನಿಯರುಗಳು ಸೇರಿದಂತೆ 300ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.



ಕನ್ನಡಪ್ರಭ

ಸ್ವಾವಲಂಬನೆ | ಎಟಿಎಂಇ ಕಾಲೇಜು ವತಿಯಿಂದ ವರುಣದಲ್ಲಿ ಕಾರ್ಯಕ್ರಮ

# ಮಹಿಳಾ ಸಬಲೀಕರಣ ಕುರಿತ ಜಾಗೃತಿ ಅಭಿಯಾನ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು- ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಎಂಜಿನಿಯರಿಂಗ್ ಕಾಲೇಜಿನ ಆಂತರಿಕ ದೂರು ಸ್ವೀಕಾರ ಸಮಿತಿ, ಮಹಿಳಾ ಘಟಕ ಮತ್ತು ವರುಣ ಗ್ರಾಮ ಪಂಚಾಯತ್ ಸಹಯೋಗದಲ್ಲಿ ಮೈಸೂರು ತಾಲೂಕು ವರುಣ ಗ್ರಾಮದ ಡಾ. ಅಂಬೇಡ್ಕರ್ ಸಮುದಾಯ ಭವನದಲ್ಲಿ ಮಹಿಳಾ ಸಬಲೀಕರಣ ಜಾಗೃತಿ ಅಭಿಯಾನ ಆಯೋಜಿಸಿತ್ತು.

ಪಿರಿಯಾಪಟ್ಟಣ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಡಿ.ಜಿ. ಮಮತಾ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಪುರುಷ ಸಮಾನರಾಗಿ ಸ್ವತಂತ್ರ ಹಾಗೂ ಸ್ವಾವಲಂಬಿ ಬದುಕು ಸಾಗಿಸುತ್ತಿದ್ದಾಳೆ. ಇದು ಮಹಿಳಾ ಸಬಲೀಕರಣದ ಒಂದು ಭಾಗವಾಗಿದೆ. ಕಾಲ ಬದಲಾದ ಹಾಗೆ ಮಹಿಳೆಯರು ತಮ್ಮ ದಾಸ್ಯತ್ವ ಮನೋಭಾವದಿಂದ ಹೊರಬಂದು ಸ್ವಾವಲಂಭಿಯಾಗಿ ಬದುಕು ಕಟ್ಟಿಕೊಳ್ಳಬೇಕು. ಮಹಿಳೆಯರ ಸ್ವಾವಲಂಭಿ ಬದುಕಿಗೆ ಸರ್ಕಾರದ ಹಲವು ಯೋಜನೆಗಳು ಆಸರೆಯಾಗಿವೆ. ಆದರೆ, ಕುಟುಂಬದ ಸದಸ್ಯರು ಹಾಗೂ ಸಮಾಜ ಇದಕ್ಕೆ ಸಹಕರಿಸುವ ಮನೋಭಾವ ಹೊಂದಿರಬೇಕು ಎಂದು ತಿಳಿಸಿದರು.



ಮಹಿಳಾ ಅಭಿವೃದ್ಧಿ ನಿಗಮದ ಸಮಾಲೋಚಕಿ ಹೇಮಾ ಮಾತನಾಡಿ, ಮಹಿಳೆಯರು ಸ್ವ-ಉದ್ಯೋಗ ಆರಂಭಿಸಲು ಸರ್ಕಾರ ಹಾಗೂ ಬ್ಯಾಂಕುಗಳಿಂದ ದೊರೆಯುವ ವಿವಿಧ ಯೋಜನೆಗಳು, ಸಾಲ ಸೌಲಭ್ಯ ಹಾಗೂ ಹಲವು ಸ್ವ- ಉದ್ಯೋಗ ತರಬೇತಿಗಳ ಕುರಿತು ಮಾಹಿತಿ ನೀಡಿದರು.

ಎಟಿಎಂಇ ಕಾಲೇಜಿನ ಪ್ರಾಂಶುಪಾಲ ಡಾ.ಎಲ್. ಬಸವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿ, ಮಹಿಳೆಯರು ಇಂತಹ ಕಾರ್ಯಕ್ರಮಗಳ ಮೂಲಕ ತಮ್ಮ ಅಭಿವೃದ್ಧಿಗೆ ಪೂರಕವಾದ ಮಾಹಿತಿ ಪಡೆದುಕೊಂಡು ಸ್ವಾವಲಂಭಿ ಬದುಕಿಗೆ ಭದ್ರ ಬುನಾದಿ ಹಾಕಿಕೊಳ್ಳುವಂತೆ ಸಲಹೆ ನೀಡಿದರು.

ಕಾಲೇಜಿನ ಆಡಳಿತಾಧಿಕಾರಿ ಡಾ. ಸಚ್ಚಿದಾನಂದಮೂರ್ತಿ, ವಕೀಲರಾದ ಎಂ.ಎ. ಹೇಮಲತಾ ಹಾಗೂ ವರುಣ ಗ್ರಾಪಂ ಪಿಡಿಒ ಶ್ರೀಧರ್, ಪ್ರಾಧ್ಯಾಪಕರಾದ ಎಚ್. ಸ್ವಪ್ನಾ, ನವ್ಯ, ರವಿ, ಲೈಬ್ರರಿ ಪ್ರಕಾಶ್, ನಂದೀಶ್ ಹಾಗೂ ವರುಣ ಗ್ರಾಪಂ ಸದಸ್ಯರು, ವಿವಿಧ ಸ್ತ್ರೀಶಕ್ತಿ ಸಂಘಗಳ ಸದಸ್ಯರು, ಆಶಾ ಕಾರ್ಯಕರ್ತೆಯರು ಇದ್ದರು.

ಪ್ರಾಧ್ಯಾಪಕ ಎಸ್. ರವಿಕುಮಾರ್ ಸ್ವಾಗತಿಸಿದರು. ಮಹಿಳಾ ಘಟಕದ ಅಧ್ಯಕ್ಷೆ ಎಸ್.ಆರ್. ಭಾಗ್ಯಶ್ರೀ ವಂದಿಸಿದರು. ಸಿ. ಚಂದ್ರಶೇಖರ್ ನಿರೂಪಿಸಿದರು.

ಪ್ರಜಾವಾಣಿ

## ವರುಣಾದಲ್ಲಿ ಮಹಿಳಾ ಸಬಲೀಕರಣ ಜಾಗೃತಿ ಕಾರ್ಯಕ್ರಮ

# 'ಸ್ವಾವಲಂಬಿ ಬದುಕು ಕಟ್ಟಿಕೊಳ್ಳಿ'

ಪ್ರಜಾವಾಣಿ ವಾರ್ತೆ

ವರುಣಾ: 'ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಪುರುಷ ಸಮಾನರಾಗಿ ಸ್ವಾತಂತ್ರ್ಯ ಹಾಗೂ ಸ್ವಾವಲಂಬಿ ಬದುಕು ಸಾಗಿಸುತ್ತಿದ್ದಾಳೆ' ಎಂದು ಪಿರಿಯಾಪಟ್ಟಣ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಡಿ.ಜೆ. ಮಮತಾ ಹೇಳಿದರು

ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ಅಂತರಿಕ ದೂರು ಸ್ವೀಕಾರ ಸಮಿತಿ, ಮಹಿಳಾ ಘಟಕ ಮತ್ತು ವರುಣಾ ಗ್ರಾಮ ಪಂಚಾಯತಿ ಸಹಯೋಗದಲ್ಲಿ ಬುಧವಾರ ಮೈಸೂರು ತಾಲ್ಲೂಕು ವರುಣಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಹಿಳೆಯರಿಗೆ ಅಂಬೇಡ್ಕರ್ ಸಮುದಾಯ ಭವನದಲ್ಲಿ ಮಹಿಳಾ ಸಬಲೀಕರಣ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮೈಸೂರಿನ ಮಹಿಳಾ ಅಭಿವೃದ್ಧಿ ನಿಗಮದ ಸಮಾಲೋಚಕರಾದ ಹೇಮಾ ಅವರು ಮಾತನಾಡಿ, 'ಮಹಿಳೆಯರು ಸ್ವ-ಉದ್ಯೋಗ ಆರಂಭಿಸಲು ಸರ್ಕಾರ ಹಾಗೂ ಬ್ಯಾಂಕ್‌ನಿಂದ ದೊರೆಯುವ ವಿವಿಧ ಯೋಜನೆ, ಸಾಲ ಸೌಲಭ್ಯ ಹಾಗೂ ಹಲವು ಸ್ವ-ಉದ್ಯೋಗ ಕುರಿತು ಮಾಹಿತಿ ನೀಡಿದರು.



ವರುಣಾ ಅಂಬೇಡ್ಕರ್ ಸಮುದಾಯ ಭವನದಲ್ಲಿ ಎಟಿಎಂಇ ಎಂಜಿನಿಯರಿಂಗ್ ಕಾಲೇಜಿನಿಂದ ಮಹಿಳಾ ಸಬಲೀಕರಣ ಜಾಗೃತಿ ಕಾರ್ಯಕ್ರಮ ನಡೆಯಿತು

ಎಟಿಎಂಇ ಕಾಲೇಜಿನ ಪ್ರಾಂಶುಪಾಲ ಡಾ.ಎಲ್.ಬಸವರಾಜ್ ಮಾತನಾಡಿದರು. ಕಾರ್ಯಕ್ರಮದ ಕುರಿತು ಕಾಲೇಜಿನ ಆಡಳಿತಾಧಿಕಾರಿ ಡಾ. ಸಚ್ಚಿದಾನಂದ ಮೂರ್ತಿ, ವಕೀಲರಾದ ಎಂ.ಎ. ಹೇಮಲತಾ ಹಾಗೂ ವರುಣಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀಧರ್ ಮಾತನಾಡಿದರು.

ಎಟಿಎಂಇ ಕಾಲೇಜಿನ ಪ್ರಾಧ್ಯಾಪಕ ಎಸ್ ರವಿಕುಮಾರ್, ಕಾಲೇಜಿನ ಸಿ.ಐ.ಸಿ.ಸಿ ಮತ್ತು ಮಹಿಳಾ ಘಟಕದ ಅಧ್ಯಕ್ಷ ಪ್ರೊ.ಭಾಗ್ಯಶ್ರೀ, ಸಿ.ಚಂದ್ರಶೇಖರ್, ಸ್ವಪ್ನಾ.ಎಚ್, ನವ್ಯ, ರವಿ, ವರುಣಾ ಗ್ರಾಮ ಪಂಚಾಯತ್ ಸದಸ್ಯರು ಇದ್ದರು.

# ಮಹಿಳೆಯ ಸ್ವಾವಲಂಬಿ ಬದುಕಿಗೆ ಯೋಜನೆಗಳು ಆಸರೆ

